

**ಎಡದಿಂದ ಬಲಕ್ಕೆ:**

1. ಅವನ ಮನಸ್ಸಿನ ಸಾಧನೆ ಸಾಧಾರಣ ಅಲ್ಲ (4)
3. ರಿಷಭ ಸ್ವರ ಕೇಳಿದಾಗೆಲ್ಲ ನೆನಪಾಗುವ ರಾಮಭಕ್ತ (3)
7. ಕಳ್ಳರನ್ನೇ ಅಪ್ಪಿ ಕುಳಿತಿದೆ ನೋಡು– ಅದಾವ ಹಕ್ಕಿ? (4)
8. ಹವೆಯನ್ನೇರಿ ಹೋಗುವ ಯಾವ ಸಾಧನ ಹಿಂದು ಮುಂದು (3)
9. ಕರೆದೊಡನೆ ತೆರೆದೀತು ಬಾಗಿಲು (2)
12. ಸಾರನ್ನೇ ತಿರುವಿದರೆ ಅಂಥದೇ ದ್ರವ ಆಹಾರ (2)
14. ಕಪ್ಪು ಹಲಗೆ ಮೇಲೆ ಬರೆಯಲು ಕಲ್ಲು ಕಡ್ಡಿ (3)
15. ಮಾರುದ್ದದ ಧ್ವನಿ– ಅದೇ ಮತ್ತೆ ಕೇಳಿಸಿದರೆ? (4)
17. ಅಶೆಯನ್ನೆಲ್ಲ ಬಿಟ್ಟರೂ ಊಟ ಬೇಕಲ್ಲ? (3)
18. ಪದ್ಧತಿಯನ್ನೇ ನೋಡಿ. ಅಲ್ಲೇ ಇದ್ದಾನೆ 'ಐಶ್ವರ್ಯದ ಒಡೆಯ' (4)

**ಮೇಲಿಂದ ಕೆಳಕ್ಕೆ:**

1. ಅವರಿಗೆ ಅದೇ ಶತ್ರು (2)
2. ಮೂರು ಜನಕ್ಕೂ ಇದೊಂದೇ ಶುದ್ಧಿಕಾರಕ ವಸ್ತು (3)
4. ಬಡಿಗೆ ಹಿಡಿದವರದ್ದು ಬರೀ ಜಂಬದ ಮಾತು (4)
5. ಮೂರ್ಖರ ಸಹವಾಸ ತುಂಬಾ ಅಪಾಯಕರ (3)
6. ವರ್ತಕನ ವಾರ್ತೆ ತುಂಬ ಬರೀ ಕನಸು (4)
10. ಹೂ ಎಸಳಿನ ಯಜಮಾನ ಸೇನಾ ಮುಖ್ಯಸ್ಥನಾದನೇ? (4)
11. ಅಬ್ಬರದ ಅಂಶವೇಕೆ? ಆತ ಪ್ರಸಿದ್ಧ ವಿಷ್ಣುಭಕ್ತ ಅರಸ (4)
13. ಸುಮ್ಮನಿರಲಾರದೆ ಈ ಯುದ್ಧವೇ? (3)
16. ದಶರಥನೇ ನೇರ ಕಾಣುವಂತಾದರೆ? (3)
17. ಆಕೆ ಅತ್ತಿದ್ದು ಬಹಳ ಹೆಚ್ಚಾಯಿತು ಬಿಡಿ (2)

## ಪದಬಂಧ: 04-3-2010ರ ಉತ್ತರಗಳು

**ಎಡದಿಂದ ಬಲಕ್ಕೆ:**
1. ಸಮಾರೋಪ; 3. ಸನ್ನಾಹ; 4. ಗಾರ್ದಭ; 6. ರಾಜ್ಯಭಾರ; 7. ಕುಸುಮ; 9. ದಾನವ; 11. ತಗಾದೆ; 13. ದಿಗಿಲು; 15. ಭದ್ರಾಸನ; 17. ಕರ್ತಾರ; 18. ಗಣೇಶ; 19. ತರದೂದು.

**ಮೇಲಿಂದ ಕೆಳಕ್ಕೆ:**
1. ಸಹರಾ; 2. ಪಗಾರ; 3. ಸಲೀಸು; 5. ಭವನ; 7. ಕುಸಿತ, 8. ಮರ್ಯಾದೆ; 9. ದಾಯಾದಿ; 10. ವಸೂಲು; 12. ಗಾಯಕ; 14. ಗಿರೀಶ; 15. ಭರತ; 16. ನಗದು.

# ಪ್ರದೇಶ ವಿಶೇಷ

## 'ಮರುಭೂಮಿ'- ಎಲ್ಲೆಲ್ಲಿ ಎಷ್ಟೆಷ್ಟು?

ಮರುಭೂಮಿ– ಜಲದ ಅಭಾವವೇ ಆದ್ಯ ಲಕ್ಷಣವಾಗಿರುವ ಭೂ ಪ್ರದೇಶವೇ ಅದು. ಹಾಗಿದ್ದೂ ಭೂ ನೆಲದ ಶೇಕಡ ಹದಿನೆಂಟರಷ್ಟು ವಿಸ್ತಾರ ಬಿಸಿ ಮರುಭೂಮಿ ಪ್ರದೇಶಗಳದ್ದೇ ಆಗಿದೆ.

ವಿಸ್ಮಯ ಏನೆಂದರೆ ಯೂರೋಪ್ ಖಂಡ ಮತ್ತು ಅಂಟಾರ್ಕ್ಟಿಕಾಗಳನ್ನು ಬಿಟ್ಟು ಉಳಿದೆಲ್ಲ ಭೂಖಂಡಗಳಲ್ಲೂ ಬಿಸಿ ಮರುಭೂಮಿಗಳಿವೆ (ಇಡೀ ಅಂಟಾರ್ಕ್ಟಿಕಾ ಒಂದು ಶೀತಲ ಮರುಭೂಮಿ ಎಂಬುದು ಗೊತ್ತು ತಾನೇ). ನೀರಿನ ಕೊರತೆ. ಹಗಲಲ್ಲಿ ಉರಿಬಿಸಿಲು, ಇರುಳಲ್ಲಿ ಕೊರೆವ ಚಳಿ, ಬಂಜರು ನೆಲ ಇತ್ಯಾದಿ ದುರ್ಭರ ಪರಿಸರ ವೈಪರೀತ್ಯಗಳಿದ್ದೂ ವಿಶಿಷ್ಟ ಜೀವಾವಾರವೂ ಆಗಿರುವ ಬಿಸಿ ಮರುಭೂಮಿಗಳು ಎಲ್ಲೆಲ್ಲಿ ಎಷ್ಟೆಷ್ಟು ಗಮನಿಸಿ:

**ಭೂಪಟದಲ್ಲಿ ಸಂಖ್ಯೆ:**

1. 'ಸಹರಾ ಮರುಭೂಮಿ'. ಉತ್ತರ ಆಫ್ರಿಕದಲ್ಲಿರುವ ಈ ಮರುಭೂಮಿಯ ವಿಸ್ತಾರ ಎಂಬತ್ನಾಲ್ಕು ಲಕ್ಷ ಚದರ ಕಿಲೋಮೀಟರ್.
2. ಆಸ್ಟ್ರೇಲಿಯನ್ ಮರುಭೂಮಿ: ಆಸ್ಟ್ರೇಲಿಯಾ ಖಂಡದಲ್ಲಿ ನೆಲೆ. ವಿಸ್ತೀರ್ಣ ಹದಿನೈದೂವರೆ ಲಕ್ಷ ಚದರ ಕಿಲೋಮೀಟರ್.
3. ಅರೇಬಿಯನ್ ಮರುಭೂಮಿ: ನೈರುತ್ಯ ಏಷಿಯ. 13 ಲಕ್ಷ ಚದರ ಕಿಮೀ.
4. ಗೋಬಿ ಮರುಭೂಮಿ: ಮಧ್ಯ ಏಷಿಯಾ. ವಿಸ್ತಾರ 10.4 ಲಕ್ಷ ಚದರ ಕಿಮೀ.
5. ಕಲಹಾರಿ ಮರುಭೂಮಿ: ದಕ್ಷಿಣ ಆಫ್ರಿಕ. 5.2 ಲಕ್ಷ ಚದರ ಕಿಮೀ.
6. ತುರ್ಕಿಸ್ತಾನ್ ಮರುಭೂಮಿ: ಮಧ್ಯ ಏಷಿಯ. 4.5 ಲಕ್ಷ ಚದರ ಕಿಮೀ.
7. ತಕ್ಲಮಕಾನ್ ಮರುಭೂಮಿ: ಚೀನಾ. 3.2 ಲಕ್ಷ ಚದರ ಕಿಮೀ.
8. ಸೊನೋರಾನ್ ಮರುಭೂಮಿ: ಯುಎಸ್‌ಎ ಮತ್ತು ಮೆಕ್ಸಿಕೋ 3.1 ಲಕ್ಷ ಚದರ ಕಿಮೀ.
9. ನಾಮಿಬ್ ಮರುಭೂಮಿ: ನೈರುತ್ಯ ಆಫ್ರಿಕ. 3.1 ಲಕ್ಷ ಚದರ ಕಿಮೀ.
10. ಥಾರ್ ಮರುಭೂಮಿ: ವಾಯುವ್ಯ ಭಾರತ: 2.6 ಲಕ್ಷ ಚದರ ಕಿಮೀ.
11. ಸೊಮಾಲಿ ಮರುಭೂಮಿ: ಸೊಮಾಲಿಯಾ. 2.6 ಲಕ್ಷ ಚದರ ಕಿಮೀ.
12. ಅಟಕಾಮಾ ಮರುಭೂಮಿ: ದಕ್ಷಿಣ ಅಮೆರಿಕ ಖಂಡ. 1.8 ಲಕ್ಷ ಚದರ ಕಿಮೀ.



■ ಎನ್. ವಾಸುದೇವ್